**IJFANS INTERNATIONAL JOURNAL OF FOOD AND NUTRITIONAL SCIENCES**
ISSN PRINT 2319 1775 Online 2320 7876
*Research Paper* **© 2012 IJFANS. All Rights Reserved**, UGC CARE Listed ( Group -I) Journal Volume 11, Iss 11, 2022

# ಭಕ್ತಿ ಸಾಹಿತ್ಯಯುಗದ ಪರಂಪರೆಯ ಪ್ರಸ್ತುತತೆ ಮತ್ತು ಕುಮಾರವ್ಯಾಸನ ಕರ್ಣಾಟ ಭಾರತ ಕಥಾಮಂಜರಿ :

ಡಾ.ವೈ.ಚಂದ್ರಬಾಬು

**ಭಕ್ತಿಯುಗದ ಮಹತ್ವ ಮತ್ತು ಅದರ ಪ್ರಸ್ತುತತೆ:** ಮಧ್ಯಕಾಲೀನ ಭಾರತದ ಧಾರ್ಮಿಕ ಇತಿಹಾಸವನ್ನು ಸಾಮಾಜಿಕ ಚರಿತ್ರೆಯಾಗಿ ಮತ್ತು ಸಾಮಾಜಿಕ ಇತಿಹಾಸವನ್ನು ಧಾರ್ಮಿಕ ಚರಿತ್ರೆಯಾಗಿ ಪರಿಕಲ್ಪಿಸಬಹುದಾಗಿದೆ. ಏಕೆಂದರೆ ಭಾರತದಲ್ಲಿ ಬೆಳೆದ ಹಲವು ಧರ್ಮಗಳ ಮುಖ್ಯ ನಿಲುವು ಧಾರ್ಮಿಕವಾಗಿರುವಷ್ಟೇ ಸಾಮಾಜಿಕವಾಗಿಯೂ ತನ್ನ ಕಾಳಜಿಯನ್ನು ಪ್ರಕಟಿಸಿದೆ. ಹಾಗಾಗಿಯೇ ಭಾರತದಲ್ಲಿ ಧರ್ಮ ಮತ್ತು ಧಾರ್ಮಿಕ ಬೆಳವಣಿಗೆಯನ್ನು ಸಾಮಾಜಿಕ ಹಾಗೂ ಸಾಂಸ್ಕೃತಿಕ ಒತ್ತಾಯಗಳ ಅಡಿಯಲ್ಲಿಯೇ ಅಧ್ಯಯನ ಮಾಡಬೇಕಾಗುತ್ತದೆ. ಮಧ್ಯಾಕಾಲೀನ ಭಾರತದ ಇತಿಹಾಸವೆಂದರೆ ಭಕ್ತಿ ಪಂಥದ, ಅನುಭಾವಿ ಸಂತರ ಪರಂಪರೆಯ ಇತಿಹಾಸವೇ ಆಗಿದೆ. ಯಾವುದೇ ಒಂದು ಧಾರ್ಮಿಕ ಆಂದೋಲನ, ಸಾಮಾಜಿಕ ಚಳುವಳಿ ಹುಟ್ಟಲು ಆ ಪರಿಸರದ ಸಂದರ್ಭ ಒಂದು ಅಗತ್ಯ ಪರಿಪ್ರೇಕ್ಷ್ಯವನ್ನು ಕಟ್ಟಿಕೊಡುತ್ತದೆ ಎನ್ನುವುದಾದರೆ, ಅದಕ್ಕೆ ಭಕ್ತಿ ಪಂಥದ ಹಿನ್ನಲೆ ಒಂದು ಸ್ಪಷ್ಟ ನಿದರ್ಶನವಾಗಿ ನಿಲ್ಲುತ್ತದೆ.

ಮಧ್ಯಕಾಲೀನ ಭಾರತದಲ್ಲಿನ ರಾಜಕೀಯ ವಿಪ್ಲವ, ಧಾರ್ಮಿಕ ಮುಖಾಮುಖಿ, ಸಾಮಾಜಿಕ ಅರಾಜಕತೆಗಳ ಇಕ್ಕಟ್ಟಿನಲ್ಲಿ ಭಕ್ತಿಪಂಥ ಒಂದು ಚಳುವಳಿಯ ಸ್ವರೂಪದಲ್ಲಿ ಬಹುತೇಕ ಭಾರತದಾದ್ಯಂತ ವ್ಯಾಪಿಸಿತು. ಆರು– ಏಳನೇಯ ಶತಮಾನದ ಪ್ರಾರಂಭದಲ್ಲಿಯೇ ತಮಿಳುನಾಡಿನಲ್ಲಿ ನಾಯನ್ಮಾರರು ಮತ್ತು ಆಳ್ವಾರರು ಈ ಅನುಭಾವಿ ಪರಂಪರೆಯ ಹರಿಕಾರರಾಗಿ ಹರ–ಹರಿ ಭಕ್ತಿಯನ್ನು ಸಾರಿದರು. ತಮಿಳುನಾಡಿನಲ್ಲಿ ನಡೆದ ಈ ಭಕ್ತಿಚಳುವಳಿಯ ಪ್ರಕ್ರಿಯೆ, ವಿಭಿನ್ನ ಕಾಲಘಟ್ಟಗಳಲ್ಲಿ ಕರ್ನಾಟಕದಲ್ಲಿ ಕಾಣಿಸಿಕೊಂಡಿತು. ಅದು ಹನ್ನೆರಡನೆಯ ಶತಮಾನದ ಶಿವಶರಣರ ಹರಭಕ್ತಿ ಹಾಗೂ ಹದಿನೈದನೆಯ ಶತಮಾನದಲ್ಲಿ ಆರಂಭವಾದ ಹರಿದಾಸರ ಕೃಷ್ಣ ಭಕ್ತಿಯ ಚಳುವಳಿಗಳು ಪ್ರಮುಖವಾದವು.

ಮಹಾರಾಷ್ಟ್ರದಲ್ಲಿ ನಾಮದೇವ, ಜ್ಞಾನೇಶ್ವರ, ತುಕಾರಾಮ ಪಂಥಗಳು. ಗುಜರಾತಿನಲ್ಲಿ ನರಸಿ ಮೆಹತಾ, ರಾಜಸ್ಥಾನದಲ್ಲಿ ಮೀರಾಭಾಯಿ, ಉತ್ತರ ಪ್ರದೇಶದಲ್ಲಿ ಕಭೀರ, ಸೂರದಾಸ, ತುಳಸೀದಾಸರು, ಪಂಜಾಬದಲ್ಲಿ ಗುರುನಾನಕ್, ಬಂಗಾಳದಲ್ಲಿ ಚೈತನ್ಯ, ಆಂಧ್ರಪ್ರದೇಶದಲ್ಲಿ ಅನ್ನಮಾಚಾರ್ಯ, ತ್ಯಾಗರಾಜ, ಉತ್ಕಲದಲ್ಲಿ ಜಗನ್ನಾಥ, ಅನಂತದಾಸ ಮೊದಲಾದವರು ಭಕ್ತಿ ಪಂಥದ ಪ್ರಸ್ತುತತೆಯನ್ನು ಸಾರಿದರು. ಅಷ್ಟೇ ಅಲ್ಲದೆ, ಸಂಸ್ಕೃತ ಭಾಷೆ ಮತ್ತು ತತ್ವಶಾಸ್ತ್ರದ ಕಗ್ಗಂಟಿನಲ್ಲಿ ಬಿಗಿದಿದ್ದ ವೈದಿಕ ಧರ್ಮಕ್ಕೆ, ಭಕ್ತಿಯ ಅನುಸಂಧಾನದ ಮೂಲಕ ಹೊಸ ಚಾಲನೆಯನ್ನು ನೀಡಿದರು. ಆ ಮೂಲಕ ಆಧ್ಯಾತ್ಮಿಕಕ್ಕೆ ಹೊಸ ಪರಿಭಾಷೆಯನ್ನು ಕಟ್ಟಿದರು. ಇಂತಹ ಬಹು ಸಂಸ್ಕೃತಿಯ ಭಕ್ತಿ ಪಂಥಗಳು ಒಂದರಿಂದ ಮತ್ತೊಂದು ಪ್ರೇರಣೆ ಪ್ರಭಾವಗಳನ್ನು ಪಡೆಯುದರ ಮೂಲಕ ತಮ ತಮ್ಮಲ್ಲಿಯೇ ಸ್ವಂತಿಕೆ ಕಸುವನ್ನೂ ಸಹ ಬೆಳೆಸಿಕೊಂಡವು. ಇವುಗಳು ಸಮಕಾಲೀನ ರಾಜಕೀಯ, ಸಾಮಾಜಿಕ ಇಕ್ಕಟ್ಟು–ಬಿಕ್ಕಟ್ಟುಗಳಿಂದ ಹೊಸ ಸವಾಲುಗಳನ್ನು ಎದುರಿಸಲು ಪ್ರಯತ್ನಿಸಿದವು ಎನ್ನುವುದರಲ್ಲಿ ಅತಿಶಯೋಕ್ತಿಯಿಲ್ಲ.

ವಚನಕಾರರಾಗಿ ಶಿವಶರಣರು ಹಾಗೂ ಕೀರ್ತನಾಕಾರರಾಗಿ ಹರಿದಾಸರೆಂಬ ಎರಡು ಜನಮುಖಿ ಆಂದೋಲನಗಳು ಕರ್ನಾಟಕ ಸಾಂಸ್ಕೃತಿಕ ಜಗತ್ತಿನ ಉತ್ಕೃಷ್ಟ ಮಾದರಿಗಳು. ಶಿವಶರಣ ಆಂದೋಲನ ವೈದಿಕ ಧರ್ಮದ ವಿರುದ್ಧದ, ಸಮತಾ ಸಮಾಜದ ಪರವಾದ ಪ್ರತಿಭಟನೆಯಾದರೆ, ವೈದಿಕ ಧರ್ಮದ ಪುನರುತ್ಥಾನದ ಆಶಯದಲ್ಲಿ ಹರಿದಾಸ ಆಂದೋಲನಗಳು ಹುಟ್ಟಿದವು. ಅದರೂ ಅದರಲ್ಲಿ ಹರಿ ಭಕ್ತಿಯ ಜೊತೆಗೆ, ಮಾನವಿಕ ಕಳಕಳಿ, ಸಾಮಾಜಿಕ ವಿಮರ್ಶೆ, ವೈಚಾರಿಕತೆಗಳು, ಶರಣ ಚಳುವಳಿಯ ಸಾಮಾಜಿಕ ಬದ್ಧತೆಯನ್ನು ಒಪ್ಪಿ ಸಮಾಜ ಶುದ್ಧೀಕರಣದ ಭಾಗವೇ ಆಗಿ ಹೊಸರೂಪ ಪಡೆಯಿತೆನ್ನಬಹುದು. ಈ ಆಂದೋಲನಗಳು ನಮಗಿಂದು ಪ್ರಸ್ತುತವೆನಿಸುವುದು, ಇವು ರೂಪಿಸಿದ ಭಕ್ತಿಯ ತಾತ್ವಿಕತೆಗಾಗಿ ಅಷ್ಟೇ ಅಲ್ಲ, ಅವು ಪ್ರತಿಬಿಂಬಿಸುವ ಸಮಾಜಮುಖಿ ಚಿಂತನೆಗಳಿಗಾಗಿ ಶಿವಶರಣರು ಮತ್ತು ಹರಿದಾಸರು ಬರಿಯ ಹರ–ಹರಿ ಭಕ್ತಿಯ ಪ್ರತಿಪಾದನೆಯನ್ನಷ್ಟೇ ಮಾಡಿಲ್ಲ. ತಮ್ಮ ಸುತ್ತ ಮುತ್ತಲ ಬದುಕನ್ನು ಹಸನಾಗಿಸುವ ಕಾಳಜಿ ತೋರಿದರು, ಜೀವನ ಮೌಲ್ಯಗಳನ್ನು ಹೊಸ ರೀತಿಯಲ್ಲಿ ಕಟ್ಟಿಕೊಟ್ಟರು. ಅದರಿಂದ ಭಕ್ತಿ ಎನ್ನುವುದು ಕರ್ನಾಟಕದಲ್ಲಿ ಧರ್ಮ ಪ್ರಸಾರ ಮತ್ತು ಸಮಾಜ ಸುಧಾರಣೆಯ ಕಾಯಕಕ್ಕೆ ತಮ್ಮ ಬದುಕನ್ನು ಅರ್ಪಿಸಿಕೊಂಡ ದಾಖಲೆಯಾಗಿದೆ. ಅವು ಇಂದಿಗೂ, ಎಂದಿಗೂ ಸಾರ್ವಕಾಲಿಕ ಎಂಬುದೇ ಈ ಭಕ್ತಿ ಸಾಹಿತ್ಯ ಮತ್ತು ಚಳುವಳಿಗಳ ಪ್ರಾಮುಖ್ಯವಾಗಿದೆ. ಅವುಗಳ ಪ್ರಭಾವ

ISSN PRINT 2319 1775 Online 2320 7876
Research Paper © 2012 IJFANS. All Rights Reserved UGC CARE Listed ( Group -I) Journal Volume 11, Iss 11, 2022

ಆ ಕಾಲದ ಕವಿಗಳ ಮೇಲೂ ಪ್ರಭಾವ ಬೀರದೇ ಇರಲಿಲ್ಲ. ರಾಜಾಶ್ರಯ ವೀರಮೌಲ್ಯಗಳ ಕವಿಗಳೂ ಸಹ ಭಕ್ತಿಗೆ ಮಾರು ಹೋಗಿರುವುದು ಆಶ್ಚರ್ಯವನ್ನು ಹುಟ್ಟಿಸುತ್ತಿಲ್ಲ. ಆ ನಿಟ್ಟಿನಲ್ಲಿ ಸಾಹಸ ಪರಾಕ್ರಮ ಗುಣಗಳ ಮಹಾಭಾರತ ಕಾವ್ಯ, ಕುಮಾರವ್ಯಾಸನಲ್ಲಿ ಭಕ್ತಿಯ ಹೂರಣವಾಗಿರುವುದನ್ನು, ಜೊತೆಗೆ ಕಾವ್ಯವಾಗಿ ಕೃಷ್ಣ ಚರಿತೆಯಾಗಿ ಮನ್ನಣೆ ಪಡೆದಿರುವುದನ್ನು ನೋಡಬಹುದು.

**ಕುಮಾರವ್ಯಾಸ** : ಕನ್ನಡದ ರಾಷ್ಟ್ರಕವಿ, ಜ್ಞಾನಪೀಠ ಪ್ರಶಸ್ತಿ ವಿಜೇತ, ಕುವೆಂಪು ಅವರು ವರ್ಣಿಸಿರುವಂತೆ ಗದುಗಿನಭಾರತ ಅಥವಾ ಕನ್ನಡ ಭಾರತವೆಂದೇ ಕರೆಯಿಸಿಕೊಳ್ಳುವ 'ಕರ್ಣಾಟಭಾರತ ಕಥಾಮಂಜರಿ' ರಚಿತ ಕವಿ " ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು, ಭಾರತ ಕಣ್ಣಲಿ ಕುಣಿಯುವುದು, ಮೈಯಲ್ಲಿ ಮಿಂಚಿನ ಹೊಳೆ ತುಳುಕಾಡುವುದು" ಈ ಮಾತುಗಳಲ್ಲಿಯೇ ಕವಿ ಪರಿಚಯವಿದೆ. ಯಾವುದೇ ನಿಜವಾದ ಕವಿಗೆ ಆತ ರಚಿಸಿದ ಕಾವ್ಯಭಾಷೆಯೇ ಜೀವಾಳ, ಅದೇ ಆತನ ವಿಳಾಸ. ತನ್ನ ಕಾವ್ಯ ವಸ್ತುವೇ ಆತ್ಮ. ಕವಿಗೆ ಸ್ವಂತ ಪರಿಚಯವೂ ಕೆಲವೊಂದು ಸಂದರ್ಭದಲ್ಲಿ ಅವಶ್ಯಕತೆಯಿಲ್ಲ. ಕವಿಗಳು ಎಲೆಮರೆಕಾಯಿಯಂತೆ ತನ್ನ ನಾಡಿನ ಜನ ಮತ್ತು  ಭಾಷೆಯ ಸೇವೆಗೆ ಅರ್ಪಿತರಾಗಿರುತ್ತಾರೆ. ಅದು ಪೂರ್ವಕಾಲದ ಕವಿಗಳ ಆಶಯವೂ ಇರಬಹುದು. ಆ ಸಾಲಿನಲ್ಲಿ ಗುರುತಿಸಿಕೊಳ್ಳುವ ಕುಮಾರವ್ಯಾಸ ಕವಿ ತನ್ನ ಪರಿಚಯವನ್ನು ಪ್ರತ್ಯೇಕವಾಗಿ ತನ್ನ ಅಚ್ಚು ಮೆಚ್ಚಿನ ಭಾಮಿನಿ ಷಟ್ಪದಿ ಪದ್ಯಗಳಲ್ಲಿ, ಕಾವ್ಯ ರಚನಾ ಪೂರ್ವಭಾಗದಲ್ಲಿಯಾಗಲಿ ಅಥವಾ ಕೊನೆಯಲ್ಲಿ ಆಗಲಿ  ಹೇಳಿಕೊಂಡಿಲ್ಲ. ಆತನ ಕಾವ್ಯ ಕನ್ನಡಿಗರ ಹೃದಯವನ್ನು ಗೆದ್ದಿರುವುದಂತೂ ನಿಸ್ಸಂದೇಹ. ಅರೆಸೊತ್ತಿಗೆಯ ಕಾಲ, ರಾಜ ಮಹಾರಾಜರ ಆಶ್ರಯ ಪಡೆದ ಪಂಡಿತ, ಮಹಾಪಂಡಿತರ ಶಿಷ್ಟ ಸಂಸ್ಕೃತಭೂಯಿಷ್ಟಿತವಾದ, ಬರೀ ರಾಜ ಸಭೆಯ, ಮಂಡನಾ ಪ್ರಧಾನವಾದ ಕಾವ್ಯವಾಗಿರುವ ಕಾಲದಲ್ಲಿಯೂ, ಜನಸಾಮಾನ್ಯರಾದ ಹಳ್ಳಿಗರ, ಅನಕ್ಷರಕುಕ್ಷಿಗಳೆಂದು ಕರೆಯುವ ಮುಗ್ಧರ ಮನಸ್ಸುಗಳಲ್ಲಿ ನೆಲೆ ನಿಲ್ಲುವಂತೆ ಮಾಡುವ ಭಕ್ತಿ ಕಾವ್ಯ ಕುಮಾರವ್ಯಾಸನ ಸಾಧನೆ. ಅದಕ್ಕಾಗಿಯೇ ಜನರೆದೆಗಳಲ್ಲಿ ಆತನ ವಿಳಾಸವಿತ್ತು. ಅದೇ ಸ್ವಚ್ಛ ಕನ್ನಡವೆಂಬ, ಕನ್ನಡಿಗನೆಂಬ ವಿಳಾಸ.

ಕನ್ನಡ ಅಥವಾ ಭಾರತ ಸಂಸ್ಕೃತಿಯ ಜೀವಾಳ ಎನ್ನುವ ರಾಮಾಯಣ, ಮಹಾಭಾರತ ಕಥೆಗಳಲ್ಲಿ ಪ್ರಸ್ತಾಪವಾಗಿರುವುದು, ಸರ್ವರ ವ್ಯಕ್ತಿತ್ವಗಳು, ಸರ್ವಗುಣಗಳು, ಸರ್ವರೂ ನಂಬುವ ಧರ್ಮ–ಅಧರ್ಮಗಳ, ಶಿಷ್ಟರೂ–ದುಷ್ಟರೂ ಎಂದು ಕರೆಯಿಸಿಕೊಳ್ಳುವ ವ್ಯಕ್ತಿಗಳಲ್ಲಿ ಕಂಡುಬರುವ, ನೈಜವಾದ ಮತ್ತು ಆಯಾ ಸಾಂದರ್ಭಿಕವಾದ ಜೀವನ ಸನ್ನಿವೇಶಗಳಲ್ಲಿ ಮನುಷ್ಯನು ತೊಳಲಾಡುವ ಮನೋವ್ಯಕ್ತಿತ್ವಗಳ ದಿವ್ಯ ಪರಿಚಯ. ಅದನ್ನು ಅಖಂಡ ಭಾರತ ನಂಬಿ ಪಾಲಿಸಿಕೊಂಡು ಬರುತ್ತಿರುವ, ಸಾಂಸ್ಕೃತಿಕ ಮುಖಾಮುಖಿಯ ಒಳನೋಟಗಳನ್ನು ಕುಮಾರವ್ಯಾಸ ಸ್ಪಷ್ಟವಾಗಿ ಚಿತ್ರಿಸಿ ಬಿಡುತ್ತಾನೆ. ಅದರ ಜೊತೆಗೆ ಹನ್ನೆರಡನೇ ಶತಮಾನದಲ್ಲಿ ಕನ್ನಡ ನೆಲದಲ್ಲಿ ಕ್ರಾಂತಿಯಾಗಿ ಬೆಳೆದು ಬಂದ ಭಕ್ತಿಯುಗಕ್ಕೆ ಈತ ಮುನ್ನುಡಿಯನ್ನೂ ಸಹ ಬರೆಯುತ್ತಾ, ವೈಷ್ಣವ ಭಕ್ತಿಯನ್ನು ಭಾರತ ಜೀವನದಲ್ಲಿ ಬೆರೆಸಲು ದಿಟ್ಟ ಹೋರಾಟವನ್ನೇ ಮಾಡುತ್ತಾನೆ. ಅದರ ರೂಪಕವೇ ವೈಷ್ಣವೀ ರೂಪವಾದ ದ್ವಾಪರಯುಗದ ಸಾಂಸ್ಕೃತಿಕ ನಾಯಕ 'ಕೃಷ್ಣ'ನ ಚರಿತ್ರೆ. ಆತನ ಕನ್ನಡ ಭಾರತದಲ್ಲಿ ಶ್ರೀಕೃಷ ಕಥಾನಾಯಕನಾಗುತ್ತಾನೆ. ಪಂಪ ರನ್ನ ಕವಿಗಳಿಗೆ ಸಿಗದ ಸ್ವಾತಂತ್ರ್ಯ ಕುಮಾರವ್ಯಾಸನಿಗೆ ದಕ್ಕುತ್ತದೆ. ಆ ಕಾರಣಕ್ಕೇ ಕುವೆಂಪು ಬಹಳ ಪ್ರೀತಿಯಿಂದ ಕುಮಾರವ್ಯಾಸನ ವೈಷ್ಣವ ಪ್ರೀತಿಯನ್ನು ಗುರುತಿಸಿ ಹೊಗಳಿರುವಂತಹದು. ಕನ್ನಡಿಗರ, ಅರ್ಥಾತ್ ಭಾರತೀಯ ಸಂಸ್ಕೃತಿಯ, ನೈಜತೆಯ ರೂಪವೇ  ಕನ್ನಡ ಕವಿ ಕುಮಾರವ್ಯಾಸ. ಅದೇ ಆತನ ವಿಳಾಸ. ಅದನ್ನು ಶಿಕ್ಷಣ ರೂಪದಲ್ಲಿ ಸಕಲ ಜನರಿಗೂ ತಲುಪಿಸುವಂತಹ ಕೆಲಸವನ್ನು ಕಲಾತ್ಮಕವಾಗಿ, ಒಬ್ಬ ಕನ್ನಡಿಗನಾಗಿ ಮಾಡಿದ್ದಾನೆ. ಆತನ ಕಾವ್ಯ, ಬದುಕನ್ನು ಬಹಳ ಅನುಭವೀ ನೆಲೆಯಲ್ಲಿ ಕಂಡಿದೆ. ಕವಿ ನಾರಣಪ್ಪನ ಹೃದಯದ ಶ್ರೀಮಂತಿಕೆಯೇ ಕಾವ್ಯವಾಗಿ, ಅದನ್ನು ರಸವತ್ತಾಗಿಸಿದೆ. ಅದರ ಪ್ರಯೋಜನೆಯನ್ನು ಕವಿ ಹೇಳಿರುವ ಮಾತುಗಳು ಸೊಗಸಾಗಿ ಮೂಡಿ ಬಂದಿದೆ.

"ಅರಸುಗಳಿಗಿದು ವೀರ, ದ್ವಿಜರಿಗೆ
ಪರಮವೇದದ ಸಾರ, ಯೋಗೀ
ಶ್ವರರ ತತ್ವವಿಚಾರ, ಮಂತ್ರಿ ಜನಕ್ಕೆ ಬುದ್ಧಿಯಗುಣ,
ವಿರಹಿಗಳ ಶೃಂಗಾರ ವಿದ್ಯಾ
ಪರಿಣತರಲಂಕಾರ, ಕಾವ್ಯಕ್ಕೆ

ಗುರುವಾಗಲು ರಚಿಸಿದ ಕುಮಾರವ್ಯಾಸ ಭಾರತವನು"

ಎಂಬುದಾಗಿ ಕವಿ ಹೇಳಿಕೊಂಡರೂ, ಕಥಾವಸ್ತುವಿನ ದೃಷ್ಟಿಯಿಂದ ಮಾನವ ಬದುಕಿನ ವೈವಿಧ್ಯದ ನೈಜತೆಯನ್ನು ಮೂಲ ಕವಿ ವ್ಯಾಸ ಗುರುತಿಸಿ, ಸಂಸ್ಕೃತ ಮಹಾಭಾರತದಲ್ಲಿ ಬರೆದಿರುವುದು ಸ್ಪಷ್ಟ. ಅದನ್ನು ಕನ್ನಡ ನೆಲದಲ್ಲಿ ಹೊಸ ಕಾವ್ಯವಾಗಿಯೇ ಅರಳಿಸಿ, ಪುಷ್ಟಿಗೊಳಿಸಿ ವಿದ್ವತ್ತಿನಿಂದ ಕನ್ನಡಿಗರ ಧಾರ್ಮಿಕ ಶಿಕ್ಷಣ ಗ್ರಂಥವಾಗಿ ರೂಪಿಸಿ, ಹರಡಿ, ಅದಕ್ಕೆ ಭಕ್ತಿಯ ಲೇಪನವನ್ನು ಸಾರದ ರೂಪದಲ್ಲಿ ತುರುಕಿ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಹೆಸರಿನಲ್ಲಿ, ಸರ್ವ ಜನರಿಗೂ ಭಕ್ಷ್ಯ ಭೋಜ್ಯವಾಗಿಸಿರುವುದು ನಿಜ. ಅದಕ್ಕೆ ಕಾರಣ ಕರ್ತೃ ಕುಮಾರವ್ಯಾಸ ಹೇಳಿಕೊಳ್ಳುವಂತೆ ಆತನ ದೈವ ವೀರನಾರಾಯಣನಾದರೂ ಕುಮಾರವ್ಯಾಸನ ಪ್ರತಿಭೆಯ ಹೂವೆಂದರೆ ತಪ್ಪಾಗಲಾರದು.

ಕುಮಾರವ್ಯಾಸನ ಕಾಲದ ಬಗ್ಗೆ ನಿಖರತೆಯಿಲ್ಲ. ಹೊಯ್ಸಳರ ಯಾದವ, ದ್ವಾರಕಪುರದ ಪ್ರೀತಿ, ವೈಷ್ಣವತೆ ಹಾಗೂ ಸೇಉಣರು ಮತ್ತು ಅವರ ಶಾಸನಗಳ ಆಧಾರದಿಂದ ಕುಮಾರವ್ಯಾಸನ ಸಂಬಂಧವನ್ನು ಗುರುತಿಸಿ 13ನೇ ಶತಮಾನವೆನ್ನಲಾಗಿದೆ. ಕ್ರಿ.ಶ.1230–35ರ ಕಾಲವೆಂದು ಗೋವಿಂದಪೈ ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಪುಷ್ಟಿ ನೀಡುವಂತೆ 13ನೇ ಶತಮಾನದಲ್ಲಿ ರಚಿತವಾಗಿದೆಯೆಂದು ಗುರುತಿಸುವ ತಮಿಳು ಮಹಾಭಾರತ ಕಥೆಯೊಂದು ಕುಮಾರವ್ಯಾಸನ ಪ್ರಭಾವಕ್ಕೆ ಒಳಗಾಗಿದೆಯೆಂಬ ಮಾಹಿತಿಯೂ ಚರ್ಚೆಯಾಗಿದೆ. ಆದರೆ ಕನ್ನಡ ನೆಲದಲ್ಲಿ ವೈಷ್ಣವಯುಗವೆಂದರೆ ಸುವರ್ಣಯುಗ 15–16ನೇ ಶತಮಾನ. ವಿಜಯನಗರ ಸಾಮ್ರಾಜ್ಯದ ಯುಗದಲ್ಲಿ ಈ ಪರಂಪರೆ ಬೆಳೆದ ಸನ್ನಿವೇಶಗಳನ್ನು ಗುರುತಿಸಿ ಅವರ ಸಮಕಾಲೀನ ಕವಿ ಕುಮಾರವ್ಯಾಸವೆಂಬ ಚರ್ಚೆಯೂ ಇದೆ. ಸಧ್ಯದ ಕಾಲ ಕ್ರಿ.ಶ.1430 ಎಂಬುದನ್ನು ಒಪ್ಪಲಾಗಿದೆ. ಹುಬ್ಬಳ್ಳಿ –ಧಾರವಾಡ ಸಮೀಪದ ಕನ್ನಡ ನೆಲವಾದ ಗದಗ ಪ್ರಾಂತ್ಯವೆಂದು ಹೆಸರಿಸಿಕೊಂಡ 'ಗದಗ' ಕುಮಾರವ್ಯಾಸನ ನೆಲವೆಂಬುದು ನಿರ್ವಿವಾದ.

ಕುಮಾರವ್ಯಾಸನ ನಿಜನಾಮ ನಾರಣಪ್ಪ. ಗದಗ ಪ್ರಾಂತ್ಯದ ಕೋಳಿವಾಡ ಈತನ ಊರು. ಆರಾಧ್ಯದೈವ ಗದುಗಿನ ವೀರನಾರಾಯಣ. ತನ್ನ ಕಾವ್ಯ ರಚನಾ ಸ್ಫೂರ್ತಿಯಾಗಿ ಅದೇ ದೈವ ಪ್ರೇರಣೆಯಾಗಿದೆ.

"ವೀರನಾರಾಯಣನೆ ಕವಿ ಲಿಪಿ
ಕಾರ ಕುಮಾರವ್ಯಾಸ, ಕೇಳುವ
ಸೂರಿಗಳು ಸನಕಾದಿಗಳು ಜಂಗಮ ಜನಾರ್ಧನರು
ಚಾರು ಕವಿತೆಯ ಬಳಕೆಯಲ್ಲ ವಿ
ಚಾರಿಸುವಡಳವಲ್ಲ ಚಿತ್ರವ
ಧಾರು ಹೋ ಸರ್ವಜ್ಞರಾದರು ಸಲುಗೆ ಬಿನ್ನಪವ"

ಎಂಬುದು ಕವಿಯ ಧೋರಣೆ. ಅದನ್ನು ನಂಬಿ ಬದುಕಿದವನು ಕುಮಾರವ್ಯಾಸ. ಕುಮಾರವ್ಯಾಸ ಯೋಗಿಂದ್ರ, ಕುಮಾರವ್ಯಾಸಮುನಿ, ಶಕರೂಪ ಎಂದು ತನ್ನನ್ನು ಕರೆದುಕೊಂಡಿದ್ದಾನೆ. ಅದರಿಂದ ಕವಿ ಸಂಸಾರಿಕ ಜೀವನಕ್ಕಿಂತ ಸನ್ಯಾಸಿ, ಯೋಗಿಯಂತೆ ಬದುಕಿರುವುದೇ ಹೆಚ್ಚು. ಕಾವ್ಯ ಪ್ರತಿಭೆಯಲ್ಲಿ ನಿಷ್ಠೆ, ಅದಮ್ಯ ಭಕ್ತಿ, ಕೆಲವೊಂದು ತನ್ನದೇ ಆದ ಬಿಗುಮಾನವಿರುವ ಪ್ರತಿಭೆಯ ಕವಿ ಕುಮಾರವ್ಯಾಸ.

"ಹಲಗೆ ಬಳಪವ ಪಿಡಿಯದೊಂದ
ಗ್ಗಳಿಕೆ ಪದವಿಟ್ಟಳುಪದೊಂದ
ಗ್ಗಳಿಕೆ ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ
ಬಳಸಿ ಬರೆಯಲು ಕಂಠಪತ್ರದ
ವುಲುಹುಗೆಡದಗ್ಗಳಿಕೆಯೆಂಬೀ
ಬಲುಹು ಗದುಗಿನ ವೀರನಾರಾಯಣನ ಕಿಂಕರಗೆ"

ಎಂಬ ತನ್ನ ಹೆಚ್ಚುಗಾರಿಕೆಯನ್ನು ಕವಿ ಘೋಷಿಸಿಕೊಂಡಿದ್ದಾನೆ. ಅದಕ್ಕೆ ತಕ್ಕಂತೆ ಆತನ ಕಾವ್ಯ, ನಿರರ್ಗಳ ವಾಕ್ಪ್ರವಾಹವೆಂಬುದರಲ್ಲಿ ಎರಡು ಮಾತಿಲ್ಲ. ಕನ್ನಡದ ಹೊಸ ಪ್ರಯೋಗಗಳಲ್ಲಿ ಈತ ನೀಸ್ಸೀಮ. ಕನ್ನಡದ ಪ್ರಮುಖ ಸಾಹಿತ್ಯ ಭಾಷಾ ಪ್ರಕಾರವಾದ ಷಟ್ಪದಿಯಲ್ಲಿ

ಭಾಮಿನಿ ಷಟ್ಪದಿಯನ್ನು ಸಮರ್ಪಕವಾಗಿ ಬಳಸಿಕೊಂಡು ಶ್ರೇಷ್ಠಕವಿ, ಮಹೋನ್ನತ ಕವಿಯಾಗಿ ಬೆಳೆದು, ಜಗತ್ತಿಗೆ ಚಿರಪರಿಚಿತವಾಗಿ ಕನ್ನಡದ ಕೊಡುಗೆಯಾಗಿದ್ದಾನೆ. ಕಾವ್ಯ ರಚನೆಯಲ್ಲಿ ಎಲ್ಲಾ ಕವಿಗಳಿಗಿರುವಂತೆ ಈತನಿಗೂ ಕವಿಯೆಂಬ ಅಹಂ ಇತ್ತು. ನಾಗಚಂದ್ರ ತನ್ನನ್ನು ಅಭಿನವ ಪಂಪನೆಂದು ಕರೆದುಕೊಂಡ. ರನ್ನ ಕವಿಯಂತೂ ತನ್ನನ್ನು ವಿಶೇಷವಾಗಿ ಹೊಗಳಿಕೊಂಡಿದ್ದಾನೆ. " ವಾಗ್ದೇವಿಯ ಭಂಡಾರದ ಮುರ್ದೆಯನ್ನೊಡೆದ ಕವಿರತ್ನನೀತ" " ರನ್ನನ ಕೃತಿರತ್ನಮುಮಂ ಪೇೞ್ ಪರೀಕ್ಷಿಸುವಂಗೆಂಟೆರ್ದೆಯೇ" ಎಂದು ಎಚ್ಚರಿಸುತ್ತಾನೆ. ಹಾಗೆ ಎಲ್ಲಾ ಕವಿಗಳಿಗೂ ಈ ರೀತಿಯ ಅಭಿಮಾನ ಇದ್ದೇ ಇರುತ್ತೇ. ಕುಮಾರವ್ಯಾಸನೂ ಇದರಿಂದ ಹೊರತಲ್ಲ. ತನ್ನ ಕವಿತ್ವದ ಶಕ್ತಿ ಸಾಮರ್ಥ್ಯಗಳನ್ನು ಸ್ವಲ್ಪ ಜೋರಾಗಿಯೇ ಹೇಳಿಕೊಂಡಿದ್ದಾನೆ. ತನಗಿಂತ ಕೆಳದರ್ಜೆಯ, ಅಥವಾ ತನ್ನನ್ನು ಟೀಕಿಸುವವರಿಗೆ ಉತ್ತರವೆನ್ನುವಂತೆ ಮಾತನಾಡುತ್ತಾನೆ.

" ಬಣಗು ಕವಿಗಳ ಲೆಕ್ಕಿಪನೆ ಸಾ
ಕೆಣಿಸದಿರು ಶುಕರೂಪನಲ್ಲವೆ
ಕುಣಿಸಿ ನಗನೇ ಕವಿ ಕುಮಾರವ್ಯಾಸನುಳಿದವರ"

ಕಾವ್ಯದಲ್ಲಿ ಪಾಂಡಿತ್ಯಕ್ಕಿಂತ ಕವಿ ಹೃದಯ ಮುಖ್ಯವೆಂಬುದು ಕುಮಾರವ್ಯಾಸನಿಗೆ ಗೊತ್ತು. ಅದರಿಂದಲೇ ಅಲ್ಲವೇ ಸಾಮಾನ್ಯ ಜನರ ಮನಸ್ಸನ್ನೂ ಕವಿ ಗೆದ್ದಿರುವುದು. ಆತನ ಕಾವ್ಯಕ್ಕೆ ಜನ ಅಭಿಮಾನಿಗಳಾಗಿರುವುದು. ಇದೇ ಕುಮಾರವ್ಯಾಸನ ಸತ್ವ. ಈ ಸತ್ವದ ಜೀವಾಳವೇ ಜನಪ್ರೀಯತೆ, ಜೊತೆಗೆ ಕೃಷ್ಣ ಭಕ್ತನಾಗಿ ಬರೆದಿರುವ ಹೆಮ್ಮೆ ಆತನಿಗೆ ಹೆಚ್ಚಿನ ಶ್ರೇಯಸ್ಸನ್ನು ತಂದುಕೊಟ್ಟಿದೆ. ಅದನ್ನೂ ಮೀರಿ ಕವಿಯಾದವನಿಗೆ ತನ್ನ ಕವಿತಾಶಕ್ತಿಯ ಬಗ್ಗೆ ಅಹಂ ಆಗಲಿ, ಅಭಿಮಾನ ಆಗಲಿ, ಹೆಚ್ಚುಗಾರಿಕೆಯಾಗಲಿ ಇರುವುದು ಸಹಜವಾದರೂ, ಸಂಯಮತನ, ವಿನಯಶೀಲತೆ, ಪರರಲ್ಲಿ, ಹಿರಿಕಿರಿಯರಲ್ಲಿ ಗೌರವ ಮೊದಲಾದವು ಅಷ್ಟೇ ಅಗತ್ಯ. ಕುಮಾರವ್ಯಾಸ ಈ ಗುಣಗಳಿಂದಲೂ ದೂರವಾಗಿಲ್ಲ. ತನ್ನ ಕೃತಿಯ ವಿಶೇಷಣಗಳ ಜೊತೆಗೆ ಪ್ರೀತಿಯ ವಿನಯವನ್ನೂ ಸಹ ಮೆರೆದಿದ್ದಾನೆ. ಗುರು ಹಿರಿಯ ಪಂಡಿತರು ತನ್ನನ್ನು ಬೆಂಬಳಿಸಿ, ತಪ್ಪುಗಳಿದ್ದರೆ ತಿದ್ದಿರಿ ಎಂದೂ ಹೇಳಿಕೊಂಡಿದ್ದಾನೆ. ಇದಲ್ಲವೇ ಕವಿಯಾದವನು ನಿರ್ವಹಿಸಬೇಕಾಗಿರುವ ಸಭ್ಯತನ.

"ಕೃತಿಯನವಧರಿಸುವುದು ಸುಕವಿಯ
ಮತಿಗೆ ಮಂಗಳವೀವುದಧಿಕರು
ಮಥಿಸುವುದು ತಿದ್ದುವುದು, ಮೆರೆವುದು, ಲೇಸ ಸಂಚಿಪುದು
ನುತಗುಣರು, ಭಾವುಕರು, ವರಪಂ
ಡಿತರು, ಸುಜನರು, ಸೂಕ್ತಿಕಾರರು
ಮತಿಯನೀವುದು ವೀರನಾರಾಯಣನ ಕಿಂಕರಗೆ" ಎಂದು ತನ್ನ ಹೃದಯವನ್ನು ಮಿಡಿದ್ದಿದ್ದಾನೆ.

**ಪಂಪ ಮತ್ತು ಕುಮಾರವ್ಯಾಸ:** ಪಂಪ ಮತ್ತು ಕುಮಾರ ವ್ಯಾಸರಿಗೆ ತಮ್ಮ ಕಾವ್ಯ ರಚನೆಗೆ ಮೂಲ ಸಾಮಗ್ರಿ ವ್ಯಾಸ ಮಹರ್ಷಿ ವಿರಚಿತ ಸಂಸ್ಕೃತ ಮಹಾಭಾರತವೇ ಆಗಿದೆ. ಇಬ್ಬರೂ ಮಹಾಭಾರತದ ಸಂಪೂರ್ಣ ಕಥೆಯನ್ನು ಆರಿಸಿಕೊಂಡು ಸರಳೀಕರಿಸುವ ಕೆಲಸವನ್ನು ಮಾಡಿದ್ದಾರೆ. ಪಂಪ ಕವಿ ವೀರಯುಗದಲ್ಲಿ ಬದುಕಿದರೆ, ಕುಮಾರವ್ಯಾಸ ಕವಿ ಭಕ್ತಿಯುಗದಲ್ಲಿ ಬಾಳಿದವರು. ಒಬ್ಬರಿಗೆ ಸಂಸ್ಕೃತದ ಗಾಢ ಪ್ರಭಾವ ಇದ್ದು ಕನ್ನಡಕ್ಕೆ ಮಿಡಿಯುವ ಮನಸ್ಸಿದ್ದರೆ, ಮತ್ತೊಬ್ಬರಿಗೆ ಭಕ್ತಿಯುಗಕ್ಕೆ ನಾಂದಿ ಹಾಡಿ ಕನ್ನಡವನ್ನು ಸಂಸ್ಕೃತಕ್ಕೆ ಸಮಾನವಾಗಿ ಬೆಳಸಿದ ಶಿವಶರಣರು ಹಾಗೂ ಹರಿದಾಸರ ಹೆಸರಿನಲ್ಲಿ ಕನ್ನಡವನ್ನು ದೈವೀ ಮತ್ತು ಭಕ್ತಿಯ ಹೆಸರಿನಲ್ಲಿ ಬೆಳಗಿಸಿದ ದೇಶಿ ಕ್ರಾಂತಿಕಾರರ ಆಂದೋಲನದ ಪರಿಚಯವೂ ಇತ್ತು. ಆ ಸಂದರ್ಭದಲ್ಲಿ ನಡುಗನ್ನಡದ ಕಾಲ ಪ್ರಾರಂಭವಾಗಿ ಅದು ಕನ್ನಡದ ಯುಗವಾಗಿತ್ತು. ಅದರಿಂದ ಕುಮಾರವ್ಯಾಸರಿಗೆ ಸ್ವಚ್ಛಕನ್ನಡಕ್ಕೆ ಬುನಾದಿಯಾಗಿ ಈ ಪರ್ವಕಾಲ ಸ್ಪಷ್ಟವಾಗಿ ದೊರಕ್ಕಿತ್ತು. ಅದರ ಜೊತೆಗೆ ವಸ್ತುವಿನ ದೃಷ್ಟಿಯಲ್ಲಿ ದಕ್ಷಿಣಾದಿ ಮೂಲಗಳು, ಎಷ್ಟೋ ಜನಪದ ಮತ್ತು ಶಿಷ್ಟ ಕಾವ್ಯಗಳು ಇಬ್ಬರಿಗೂ ಪ್ರೇರಣೆಯಾಗಿರಬಹುದು. ಆದರೆ ಆಯ್ಕೆಗಳು ಕುಮಾರವ್ಯಾಸನಿಗೆ ಹಲವಿದ್ದವು. ಇವರಿಬ್ಬರ ಕಾಲ, ಶತಮಾನಗಳ ಹರಹು ಬಹಳ ದೂರ. ಪಂಪ ಬದುಕಿ ಬಾಳಿದ ಬಹಳ ಶತಕಗಳ ನಂತರ ಕುಮಾರವ್ಯಾಸ ಬಂದ. ವ್ಯಾಸಭಾರತವನ್ನು ಬಳಸಿಕೊಂಡ ಪಂಪ

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 11, Iss 11, 2022

'ಕವಿವ್ಯಾಸನೆನೆಂಬ ಗರ್ವಮೆನಗಿಲ್ಲ' ಎಂದಿದ್ದರೆ, ನಾರಣಪ್ಪನೆಂಬ ಕುಮಾರವ್ಯಾಸನು ತನ್ನ ಹೆಸರನ್ನೇ ವ್ಯಾಸನಿಂದ ಕಾವ್ಯನಾಮವಾಗಿ ಪಡೆದು, ಕುಮಾರ, ಸಣ್ಣವನೆಂದು, ವ್ಯಾಸನ ಪರಂಪರೆಯವನು ಎಂದು ಪರಿಚಯ ಮಾಡಿಕೊಂಡಿದ್ದಾನೆ. ನಾರಣಪ್ಪ ಕುಮಾರವ್ಯಾಸನಾಗಿ ಬದಲಾಗಿದ್ದಾನೆ.

ವ್ಯಾಸನ ಸಮಸ್ತ ಭಾರತವನ್ನು ವೀರಮೌಲ್ಯಗಳ ನೆಲೆಯಲ್ಲಿ ಪಂಪ ವಿವರಿಸಿ, ತಮ್ಮ ಕಾಲದ ಸಮಕಾಲೀನ ಸಮಾಜವನ್ನು ಪರಿಚಯಿಸಿದ್ದಾನೆ. " ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ" ಎಂದು ತಿಳಿಸಿ, ತನ್ನ ಆಶ್ರಯದಾತನಾದ ಅರಿಕೇಸರಿಯನ್ನೂ ಸಹ ಮಹಾಭಾರತದ ವೀರ ಪಾಂಡವ ಕುಮಾರ ಅರ್ಜುನನ ಜೊತೆ ಸಮೀಕರಿಸಿ, ರಾಜಧರ್ಮವನ್ನು ಮೆರೆದಿದ್ದಾನೆ. ನಾಯಕನನ್ನಾಗಿಯೂ ಮಾಡಿಕೊಳ್ಳಬೇಕಾಯಿತು. ಕ್ಷತ್ರಿಯ ಪೌರುಷವನ್ನು ಕಾವ್ಯದಲ್ಲಿ ಅನಾವರಣಗೊಳಿಸಿರುವುದು ಇಲ್ಲಿನ ವಿಶೇಷ. ಕವಿ ಮತ್ತು ರಾಜನ ಆತ್ಮೋನ್ನತಿಯ ಗೆಳೆತನ ಇಲ್ಲಿ ಎದ್ದು ಕಾಣುತ್ತದೆ. ಅದರ ಜೊತೆಗೆ ಆಕಾಲದ ಹೊಸ ಸಾಹಿತ್ಯದ ದಾಖಲೆಯ ರೂವಾರಿ, ಆದಿಕವಿ ಪಂಪನೇ ಆದ ಕಾರಣ ಕೆಲವು ವಿಶೇಷ ಪ್ರಯೋಗಗಳನ್ನು ಮಾಡಿದ್ದಾನೆ. ಲೌಕಿಕ–ಆಗಮಿಕ, ವಸ್ತುಕ–ವರ್ಣಕ, ಗದ್ಯ–ಪದ್ಯದ ಚಂಪೂ, ಸಂಸ್ಕೃತ ಕನ್ನಡಗಳ ಮಿಶ್ರಣ, ರಾಜನಿಷ್ಠೆ–ಧರ್ಮನಿಷ್ಠೆ, ಅವುಗಳಲ್ಲಿಯೇ " ಮಾನವಕುಲವೊಂದೇವಲಂ" ಎಂಬ ದಿಟ್ಟ ಸಾರ್ವತ್ರಿಕ ಮತ್ತು ಸಾರ್ವಜನಿಕ ನಿರ್ಧಾರ, ಪಂಪಕವಿಯ ಸತ್ವಗಳಾಗಿ ಮೇಲ್ನೋಟಕ್ಕೆ ಕಾಣುವ ವಿಶೇಷಣಗಳು. ಆದರೆ ಕುಮಾರವ್ಯಾಸನಲ್ಲಿ ಇದು ವ್ಯತಿರಿಕ್ತ. ಆತ ಯಾವುದೇ ರಾಜನ ಆಶ್ರಯಕ್ಕೆ ಋಣನಾಗಿಲ್ಲ. ಸ್ವತಂತ್ರ ಕವಿ ಎಂದರೂ ಅಚ್ಚರಿ ಪಡಬೇಕಿಲ್ಲ. ಈತನ ಕಾಲ ಹಲವಾರು ಸಂಘರ್ಷಗಳ ಮಧ್ಯೆ ಬೆಂದು ಶಾಂತಿಯನ್ನು ಅರಸುವ ಶೋಧ ಕಾಲ. ಅದಕ್ಕಾಗಿ ಆಗಲೇ ಚಿಗುರಿದ್ದ ಭಕ್ತಿಯೆಂಬ ಅಮೃತ ಎಲ್ಲಾ ನೋವುಗಳಿಗೂ ಸುಲಭ ಪರಿಹಾರವಾಗಿತ್ತು. ಧರ್ಮ ಸಂಘರ್ಷ ಮಾಗಿ ಅನ್ಯ ಧರ್ಮ ಸಹಿಷ್ಣತನದ ಸಮ್ಮಿಶ್ರಣದ ಕಾಲ ಪ್ರಾರಂಭವಾಗುತ್ತಿತ್ತು. ಅದಕ್ಕಾಗಿ ಮುಕ್ತಿಗೆ ಭಕ್ತಿಯೇ ಮೂಲವೆಂಬ ನಂಬಿಕೆಯಲ್ಲಿ ಮಾಗಿದ, ಚಿಗುರಿದ ಚೈತನ್ಯರೂಪಿ ಕುಮಾರವ್ಯಾಸ. ಆ ಕಾರಣಗಳಿಂದಲೇ ಧೈರ್ಯವಾಗಿ, ವೈಷ್ಣವ ಧರ್ಮದ ಮೂಲದವನಾಗಿ, ಶ್ರೀಕೃಷ್ಣನ ಪರಮ ಭಕ್ತನೆಂಬುದನ್ನು ತನ್ನ ಕಾವ್ಯದ ಮೂಲಕ ತೋರಿಸಿದ್ದಾನೆ."ತಿಳಿಯ ಹೇಳುವೆ ಕೃಷ್ಣಕಥೆಯನು ಇಳೆಯಜಾಣರ ನೆಲೆಗೆ ಪಂಚಮ ಶೃತಿಯ ಸೊರೆವೆನು ಕೃಷ್ಣ ಮೆಚ್ಚಲಿಕೆ" ಎಂಬ ಕಾವ್ಯೋದ್ದೇಶವನ್ನು ಸಾರಿದ್ದಾನೆ.

**ಕುಮಾರವ್ಯಾಸ ಭಾರತ:** ಕುಮಾರವ್ಯಾಸನು ತನ್ನ ಕಾವ್ಯದಲ್ಲಿ ರಚಿಸಿದ ಪಾತ್ರಗಳು ಜೀವಂತ ವ್ಯಕ್ತಿತ್ವಗಳಿಗೆ ಕನ್ನಡ ಹಿಡಿದ ದರ್ಶನಾಲೋಕ. ಅವು ಸಂದರ್ಭ, ಸನ್ನಿವೇಶ, ಭಾವುಕತೆ, ವೈಚಾರಿಕತೆಗಳ ನೆಲೆಯಲ್ಲಿ ಕಟ್ಟಿದ ಅಮೃತ ಶಿಲೆಗಳು. ಒಂದೊಂದು ಪಾತ್ರವೂ ಒಂದೊಂದು ಭಾವಕ್ಕೆ ಸಂಕೇತ, ಪ್ರತಿಮೆಯಾಗಿದೆ. ಕಾರಣ–ಕಾರ್ಯಗಳ ಸಂಬಂಧವನ್ನು ಪಡೆದು ಕೆಲವೊಂದು ಸಂದರ್ಭದಲ್ಲಿ ಶಿಷ್ಟ–ದುಷ್ಟ ಎಂಬ ಭಾವಗಳು ನಗಣ್ಯವಾಗಿಬಿಡುತ್ತವೆ. ಒಂದೊಂದು ಸನ್ನಿವೇಶ, ಸಂದರ್ಭದಲ್ಲಿ ಆ ಪಾತ್ರಗಳು ಮನಸ್ಸಿನಲ್ಲಿ ಉಳಿದುಬಿಡುತ್ತವೆ. ಕುಮಾರವ್ಯಾಸನ ಕರ್ಣ ಗೆಳತನ, ಪರಾಕ್ರಮ, ದಾನ, ತ್ಯಾಗಗಳಿಗೆ ಹೆಸರಾದರೆ, ಅರ್ಜುನ ವೀರತನಕ್ಕೆ, ರಸಿಕ, ಶೃಂಗಾರಕ್ಕೆ ಹೆಸರುವಾಸಿ, ಛಲಗಾರ, ಅಭಿಮಾನಧನನಾಗಿ ದುರ್ಯೋಧನ ದುಷ್ಟನಾಗಿಯೂ ಮಾನ್ಯ. ಭೀಮ ಬಲಿಷ್ಠ, ದ್ರೋಣ ಗುರು, ಭೀಷ್ಮ ಗಾಂಭೀರ್ಯ, ಅಜಾತಶತೃ, ಧರ್ಮರಾಯ ಧರ್ಮಿಷ್ಟ. ಕೃಷ್ಣ ದೈವ, ಧರ್ಮ ಪಕ್ಷಪಾತಿ, ವೈಷ್ಣವರೂಪಿ, ಉತ್ತರಕುಮಾರ ಹಾಸ್ಯಕ್ಕೆ, ಒಣತನಕ್ಕೆ ರೂಪಕ. ದ್ರೌಪದಿ ಸೌಂದರ್ಯದ ಗಣಿ, ಕುಲನಾರಿ, ರೋಷದ ಜಾಲೆ. ಹೀಗೆ ಒಂದು ಎರಡು ಪಾತ್ರಗಳಲ್ಲ ಇಡೀ ಭಾರತ ರಸಹೂರಣ ಎಂಬುದರಲ್ಲಿ ಎರಡು ಮಾತಿಲ್ಲ. ವಾಸಮುನಿ ಒಂದು ಕೈಯಾದರೇ, ಕುಮಾರವ್ಯಾಸ ಮತ್ತೊಂದು ಶಿಖರ. ವಿಮರ್ಶಕರು ಈತನನ್ನು 'ರೂಪಕ ಸಾಮ್ರಾಜ್ಯದ ಚಕ್ರವರ್ತಿ' ಎಂದೇ ಹೊಗಳಿದ್ದಾರೆ. ಎಷ್ಟೋ ಮಾತುಗಳಲ್ಲಿ ವರ್ಣಿಸಬೇಕಾದ ಫಲವನ್ನು ಒಂದು ರೂಪಕದಲ್ಲಿಯೇ ಸಾಧಿಸಿಬಿಡುತ್ತಾನೆ ಕುಮಾರವ್ಯಾಸ, ಅದು ಆತನ ವೈಶಿಷ್ಟ್ಯ." ಭ್ರೂಲತೆಯ ಸುರಚಾಪ ಮಾತಿನ ಗಾಳ, ರೋಷಜ್ವಾಲೆ, ವಿಲಾಸಗಳು ಕುಣಿದಾವು, ಒಣಗುತಿದೆ ಕುರುವಂಶಲತೆ, ಸಿಡಿಲ ಮೊಟ್ಟಣಗಟ್ಟಿ, ಕೊಂಡವರೇ ಕಾರುಣ್ಯ ವರ್ಷಮಾಮಗಲುಗಲಿಲಿಸುರಿ, ವಿಜಯ ವಧೂಕಜಾಕ್ಷವ ತಿರುಹಿ ಹಾಲುಟ್ಟನ ಗಂಡನಾದನು ಅಪಕೀರ್ತಿನಾರಿಯ ಸೆರಗಹಿಡಿದರು' ಎಂಬ ಕೆಲವು ಉದಾಹರಣೆಯ ಮಾತುಗಳಲ್ಲಿ ರಮ್ಯ ಕವಿತ್ವವನ್ನು ಕಾಣಬಹುದು.

ಭಾಷೆಯ ಶೈಲಿಯಲ್ಲಿ ಕುಮಾರವ್ಯಾಸ ಪಂಪನಂತೆ ಗಡಸುತನಕ್ಕೆ ಹೋಗುವುದಿಲ್ಲ. ಸರಳ, ಶುದ್ಧ ತಿಳಿಗನ್ನಡ ಆತನ ಭಾಷೆ. ಜನಪದರಿಗೂ ತಿಳಿಯುವಂತೆ ಮಾಡುವ ಉದ್ದೇಶ ಬಹುಶಃ ಇತ್ತೇನೋ? ಜನಪದ ನುಡಿಗಟ್ಟುಗಳ ಜೊತೆಗೆ ಕೆಲವೊಂದು

ISSN PRINT 2319 1775 Online 2320 7876
*Research Paper* **© 2012 IJFANS. All Rights Reserved**, UGC CARE Listed ( Group -I) Journal Volume 11, Iss 11, 2022

ಸಂದರ್ಭಗಳಲ್ಲಿ ಓದುಗರಿಗೆ ಸುಲಭವಾಗಿ ಅರ್ಥವಾಗಲು ಸಾಮಾನ್ಯ ಭಾಷೆಯನ್ನೂ ತರುತ್ತಾನೆ. ಕುಮಾರವ್ಯಾಸನಲ್ಲಿ ಯಾವ ಶಬ್ದಬೇಕಾದರೂ ಕಾವ್ಯದಲ್ಲಿ ಸ್ಥಾನ ಪಡೆದುಕೊಳ್ಳುತ್ತದೆ. ಜನರ ಹೃದಯ ಮುಟ್ಟುವುದೇ ಆತನ ಗುರಿ. ಇಡೀ ಕಾವ್ಯದಲ್ಲಿ ಒಂದೇ ಒಂದು ಛಂದಸ್ಸು 'ಭಾಮಿನಿ' ಷಟ್ಪದಿಯನ್ನು ಬಳಸಿದ್ದರೂ, ಎಲ್ಲೂ ಹೆಚ್ಚಾಗಿ ಬೇಸರವಾಗುವುದಿಲ್ಲ. ರಸಗ್ರಹಣ, ಭಾವಬಂಧನ, ಸಂಬಂಧ, ವೈವಿದ್ಯಮಯ ಭಾವಗಳ ಅನಾವರಣದಲ್ಲಿ ಕುಮಾರವ್ಯಾಸನ ಭಾಷೆಯೆಂಬುದು ಒಂದು ಪದಗಳ ಜೋಡನೆಯಾಗದೆ ರಕ್ತಮಾಂಸಗಳ ಹೂರಣ, ಆತ್ಮಬೆರತ ಸಜೀವತ್ವ ಕಾವ್ಯವಾಗಿ ರಸಪಾಕವಾಗಿರುವಾಗ ಶೈಲಿ ತಾನಾಗಿಯೇ ಮಹೋನ್ನತ ಅಥವಾ ಉತ್ಕೃಷ್ಟವಾಗುತ್ತದೆ. ಅದೆಲ್ಲವನ್ನೂ ಮೀರಿ ಕೃಷ್ಣನೆಂಬ ಭಕ್ತಿರಸ ಬೆರೆತು ಎಲ್ಲಾ ರಸಭಾವಗಳ ಶೋಧಕವಾಗಿ ಕಾವ್ಯದಲ್ಲಿ ಶೋತೃಗಳನ್ನು ಮೈಮರೆಸುತ್ತದೆ.

ಕುಮಾರವ್ಯಾಸ ಭಾರತದ ವೈಶಿಷ್ಟ್ಯಗಳಲ್ಲಿನ ಕೆಲವೊಂದು ಕಥನ ಮತ್ತು ರಸಭಾವಗಳನ್ನು ನೋಡುವುದಾದರೆ, ಆತನು ಹೇಳದೆ ಬಿಟ್ಟಿರುವ ಸನ್ನಿವೇಷಗಳೇ ಇಲ್ಲ. ಎಲ್ಲವುಗಳ ವರ್ಣನೆಯಲ್ಲಿಯೂ ಕುಶಲತೆಯನ್ನು ಮೆರೆದು ಕೊನೆಗೆ ವಿವೇಕ ಬಲದಿಂದ ಔಚಿತ್ಯಾನೌಚಿತ್ಯಗಳನ್ನು ತಿಳಿಸುವುದರಲ್ಲಿ ಕುಮಾರವ್ಯಾಸ ಅದ್ವಿತೀಯನು. ಧರ್ಮರಾಯನ ಧಾರ್ಮಿಕ ಸ್ವಭಾವವನ್ನು ನೋಡುವಾಗ ಅವನು ಮನಸ್ಸಿಗೆ ಮೆಚ್ಚುಗೆಯಾಗುತ್ತಾನೆ. ಭೀಮನ ಪರಾಕ್ರಮಗಳು ನಮ್ಮ ತೋಳನ್ನು ಏರಿಸುತ್ತದೆ. ಕೊನೆಗೆ ಕೌರವನಾದ ದುರ್ಯೋಧನನನ್ನು ನೋಡಿದಾಗ ಬಾಳಿದರೆ ಪ್ರಪಂಚದಲ್ಲಿ ಈತನಂತೆ ಬಾಳಬೇಕು ಎನಿಸುತ್ತದೆ. ರಸ ವಿಷಯದಲ್ಲಿ ಶೃಂಗಾರವೆಂದರೆ ಶೃಂಗಾರವೇ ಅದರಲ್ಲಿ ಮತ್ತೊಂದು ಬರುವುದಿಲ್ಲ. ವೀರರಸವೆಂದರೆ ವೀರವೇ, ಅದು ಬೇರೆಯದರ ಜೊತೆ ಬೆರೆಯುವುದಿಲ್ಲ. ಇದು ಕುಮಾರವ್ಯಾಸನ ವೈಶಿಷ್ಟ್ಯ. ಕೆಲವು ಸಂದರ್ಭಗಳಲ್ಲಿ ಎರಡನ್ನೂ ಬೆರೆಸುವ ಔಚಿತ್ಯವು ಕುಮಾರವ್ಯಾಸನಲ್ಲಿ ಸೊಗಸು.

ಉದಾಹರಣೆ ದ್ರೌಪದಿಯ ಸೌಂದರ್ಯ ವರ್ಣನೆಯನ್ನು ಮಾಡುತ್ತ, ಕವಿ ಅವಳ ಅಂದ ಸಖಿಯರ ನೋಟ ಕೂಟಗಳಲಿ ತಣಿಯದು ಧಣಿಯದು ಎನ್ನುತ್ತಾನೆ.

" ಹೊರೆಯ ಸಖಿಯರ ನೋಟ ಮೈಯಲಿ
ಹರಿದು ಬಳಲದು, ಚಿತ್ತವೀಕೆಯ
ಧರಿಸಿ ಕುಸಿಯದು, ಕಿವಿಗಳಿಗೆ ಮೆಲ್ನುಡಿಯ ಸವಿಸವಿದು
ಅರುಚಿಯಾಗದು, ನಾಚಿಕವು ಮೈ
ಪರಿಮಳದ ಪೂರದಲಿ ಗಂಧಾಂ
ತರಕೆ ನೆರೆಯದು ರೂಪವೇನೆಂಬೆನು ನಿತಂಬಿನಿಯಾ"

ದ್ರೌಪದಿ ರೂಪದ ಭಾರ ಸಖಿಯರಿಗೆ ಭಾರವಾದರೂ, ಅವು ನೋವು ಕೊಡುವುದಿಲ್ಲ. ಏಕೆಂದರೆ ಅವರು ಅದನ್ನು ಅನರ್ಘ್ಯವಾದ ರತ್ನಗಳೆಂದು ಭಾವಿಸಿದ್ದಾರೆ. ಅವು ಭಾರವಾಗಿದ್ದರೂ ರತ್ನಗಳಲ್ಲವೇ? ದೇಹಾಯಾಸವು ಆನಂದಾನುಭವದಲ್ಲಿ ಮರೆತು ಹೋಗುತ್ತದೆ. ಸಖಿಯರ ಕಿವಿಗಳಿಗೆ ಮೆಲುನುಡಿಗಳನ್ನು ಕುಡಿಯಬೇಕೆಂಬ ಆಸೆ ಹೆಚ್ಚಾದರೂ, ಮಿತಿಯಿಲ್ಲದೆ ಕುಡಿದರೆ ಅದು ಅರುಚಿಯಾಗಬೇಕು ಆದರೆ ಇಲ್ಲಿ ಅದು ಆಗುವುದಿಲ್ಲ. ದ್ರೌಪದಿಯ ಮಾತಿನಲ್ಲಿ ಅಮೃತಯಿದೆ. ಆಕೆಯ ದೇಹ ಪರಿಮಳವನ್ನು ಬೆಂಬತ್ತಿಕೊಂಡು ಹೋಗುವ ಘ್ರಾಣಶಕ್ತಿಗೆ ಅನ್ಯ ಗಂಧಗಳ ಸ್ಮರಣೆಯೇ ಆಗುವುದಿಲ್ಲ, ಎಂಬ ಕವಿಯ ವರ್ಣನಾಶಕ್ತಿಗೆ ಮಾರು ಹೋಗದವರು ಯಾರು.

ದೌಪದಿಯನ್ನು ಕುಮಾರವ್ಯಾಸ ವರ್ಣಿಸಿರುವಷ್ಟು ಇತರೇ ಯಾವ ಕವಿಗಳು ವರ್ಣಿಸಿಲ್ಲ ಎನ್ನಬಹುದು. ಅವನಲ್ಲಿ ದ್ರೌಪದಿ, ಒಂದು ಅನರ್ಘ್ಯ ರತ್ನ. ಇಂತಹ ಪಾತ್ರ ಅಲಂಕಾರಗೊಂಡಾಗ ಒಂದು ರೀತಿ, ಇಲ್ಲದಿರುವಾಗ ಮತ್ತೊಂದು ರೀತಿ ಸೊಗಸು. ವಿರಾಟರಾಜನ ಆಸ್ಥಾನದಲ್ಲಿ ಸೈರಂಧ್ರಿಯಾಗಿದ್ದ ದ್ರೌಪದಿಯ ರೂಪವರ್ಣನೆ ಕೀಚನನ್ನು ಸೆಳೆದ ಸನ್ನಿವೇಶ:

"ಅರಿದು ನೆತ್ತುರುಗಾಣದಲಗಿದು
ನೆರೆಬಿಗಿಯೆ ಮೈ ಬಾಸುಳೇಳದ
ಹುರಿಬಲಿದ ನೇಣ್ ಸೋಕಿದರೆ ಹೊಗೆ ಮಸಗದೆದೆಗಿಚ್ಚು
ಅರೆರೆ ಕಂಗಳ ಧಾರೆಯಾವನ

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 11, Iss 11, 2022

ಕೊರಳ ಕೊಯ್ಯದದಾವನರಿಕೆಯ

ಹುರುಳುಗೆಡಿಸದದಾರನುರುಹುದು ಶಿವಾಶಿವಾ!ಎಂದ."

ಕೀಚಕನು ಕಂಡ ದ್ರೌಪದಿ ಸೌಂದರ್ಯ ಅದೆಷ್ಟು ಉಗ್ರವಾಗಿದೆ. ವಿರಾಟರಾಜನ ಅರಮನೆಯಲ್ಲಿದ್ದಾಗ ದ್ರೌಪದಿ, ಜಕ್ಕ ಜವ್ವನೆಯಾಗಿದ್ದಳು. ಅವಳ ರೂಪವು ಕಣ್ಣು ಕುಕ್ಕುವಂತಿತ್ತು. ಕೀಚಕನ ಮನೆಗೆ ಅವಳು ಬಂದಾಗ ಮದದಾನೆ, ಕಂದರ್ಪನ ಮಹಾಮಂತ್ರಾಧಿದೇವತೆಯೇ ಆಗಿದ್ದಳು. ಕೀಚಕನ ಹೃದಯಕ್ಕೆ ಗಾಳ ಹಾಕುವ ಮೀನು ಅವಳಾಗಿದ್ದು.' ಆಕೆಯ ಕಂಗಳ ಧಾರೆ ರಕ್ತವಿಲ್ಲದಂತೆ ಎದೆಯನ್ನು ಸೀಳಿ ನಾಶಮಾಡುವ ಖಡ್ಗಧಾರೆಯಂತೆ, ನಿರ್ದಯವಾಗಿ ಬಿಗಿದು ಗಾಯಗಳಾಗದಂತೆ ಬಂಧಿಸುವ ರಜ್ಜುಗಳಂತೆ! ಇಷ್ಟೂ ಅಲ್ಲ. ಎದೆಗೆ ಹಿಡಿದ ಕಿಚ್ಚೇ ಅದು. ಆದರೆ ಹೊಗೆ ಮಾತ್ರ ಏಳುವುದಿಲ್ಲ ಎಂಬುದೊಂದು ನ್ಯೂನ್ಯತೆ, ಇದನ್ನು ನ್ಯೂನ್ಯತೆಯೆಂದು ಹೇಳಬಹುದೇ! ಕೂಡದು ಇದೊಂದು ಅಧಿಕ ಗುಣ. ಇದು ಕುಮಾರವ್ಯಾಸ, ದ್ರೌಪದಿಯನ್ನು ನೋಡಿದ ಕೀಚನಕ ಮನೋಸ್ಥಿತಿಯನ್ನು ಕಟ್ಟಿಕೊಡುವ ಪರಿ. ಈ ವರ್ಣನೆಯಿಂದ ಪರಸ್ತ್ರೀಯನ್ನು ಮೋಹಿಸುವ ಕೀಚಕನೂ ಮಾನ್ಯವಾಗಿಬಿಡುತ್ತಾನೆ. ಅದೇ ಕುಮಾರವ್ಯಾಸನ ಕವಿತಾ ಕೌಶಲ್ಯ.

ಇನ್ನೂ ದ್ರೌಪದಿಯ ಪ್ರೀತಿಯ ಗಂಡ ಬಲಿಷ್ಠ ಭಾರ್ಗವ ಬೀಮನು ತನ್ನ ಮುದ್ದಿನ ಹೆಂಡಿತಿಯನ್ನು ಪೀಡಿಸಿದ ಕೀಚಕನ ಸಾವನ್ನು ಕೋರಿ ನುಡಿವ ಪರಾಕ್ರಮತನವನ್ನು ವರ್ಣಿಸುವ ವೀರ ರಸವರ್ಣನೆ ಅಮೋಘ.

" ಬಸುರ ಬಗಿವೆನು ಕೀಚಕನ ನಸು

ಮಿಸುಕಿದರೆ ವೈರಾಟವಂಶದ

ಹೆಸರ ತೊಡೆವೆನು ನಮ್ಮನರಿದರೆ ಕೌರವವ್ರಜವ

ಕುಸುರಿದರಿವೆನು ಭೀಮ ಕಷ್ಟವ

ನೆಸಗಿದನು ಹಾ ಎಂದರಾದಡೆ

ಮುಸುಡನಮರಾದ್ರಿಯಲಿ ತೇವೆನು ದೇವಸಂತತಿಯ.

ಇದು ವೀರ ಭೀಮ ಕಾರ್ಯವರ್ಣನೆ. ತನ್ನ ಹೆಂಡತಿಗೆ ಧೈರ್ಯ ತುಂಬುವ ಗಂಡನ ಕರ್ತವ್ಯವನ್ನು ನಿರ್ವಹಿಸುವ ಭೀಮ ಪೌರುಷತನದ ಸಂಕೇತವಾಗುತ್ತಾನೆ.  ಇನ್ನು ಕರ್ಣನ ಪಾತ್ರವಂತೂ ದುರಂತವನ್ನು ಮೀರಿ ಅವನ ಕರ್ಮಗಳ ರೂಪಕವೆಂಬ ಸಮರ್ಥನೆಯಲ್ಲಿ ಕೊನೆಗೊಳ್ಳುತ್ತದೆ. ಆದರೂ ಕುಮಾರವ್ಯಾಸನಲ್ಲಿ ಉದಾತ್ತ ಪಾತ್ರವಾಗಿ ಮನಸಿನಲ್ಲಿ ಉಳಿಯುತ್ತದೆ.

ಕೊನೆಗೆ  ಕುಮಾರವ್ಯಾಸನ ಕಾವ್ಯೋದ್ದೇಶ ಎನ್ನುವಾಗ ಕೃಷ್ಣ ಪಾತ್ರ ಗಮನೀಯ. ಮಹಾಭಾರತ ಕೌರವ ಪಾಂಡವರ ದಾಯಾದಿ ಕಲಹವಾದರೂ ಅವರೆಲ್ಲರೂ ಕರ್ಮ ಸಂಕೇತಗಳು ಮಾತ್ರ. ಕೃಷ್ಣನೇ ಕುಮಾರವ್ಯಾಸನ ಕಾವ್ಯದ ನಾಯಕ. ಏಕೆಂದರೆ ಕುಮಾರವ್ಯಾಸ ಭಕ್ತಕವಿ. ಮಹಾಭಾರತವು ಪುರಾಣ ಕಾವ್ಯ. ಶ್ರೀಕೃಷ್ಣನು ಅವತಾರ ಪುರುಷನು, ಭಗವಂತನು ಅಷ್ಟೇ ಅಲ್ಲ, ಆತ ತಾನು ಆರಾಧಿಸುವ ಗದುಗಿನ ವೀರನಾರಾಯಣನು. ಇಲ್ಲಿ ಭಕ್ತಿಯೇ ಪ್ರಧಾನ. ಧರ್ಮವೇ ಮುಖ್ಯವಾದುದು. ಉಳಿದ ಕಲೆ ಜೀವನ ವಿಶೇಷಗಳು ಧರ್ಮರಕ್ಷಣೆಗೆ ಪೂರಕಮಾತ್ರ. ಭಗವಂತನಾದ ಶ್ರೀಕೃಷ್ಣ ಲೀಲೆಗಳಿಗೆ ಪಾಂಡವರು ಕೌರವರು ವಸ್ತು ಸಾಮಗ್ರಿಗಳಾಗಿ ಶ್ರೀಕೃಷ್ಣ ಭಕ್ತಿಗೆ ಪೂರಕವಾಗಿ ಕಾಣಿಸಿಕೊಂಡಿದ್ದಾರೆ. ಕೃಷ್ಣನೇ ತನ್ನ ಕಾವ್ಯದ ನಾಯಕ ಎನ್ನುವುದಕ್ಕೆ ಕುಮಾರವ್ಯಾಸ ಚಿತ್ರಿಸಿರುವ ಕುರುಕ್ಷೇತ್ರದ ಯುದ್ಧ ಸನ್ನಿವೇಶದ ಒಂದು ಘಟನೆಯನ್ನು ಉಧಾಹರಿಸಬಹುದು, " ರಾಜಮಂದಿರಕ್ಕೆ ದುರ್ಯೋಧನನು ಆತನ ಹೊಗಳುಭಟ್ಟರು ಬಂದರು. ಆ ದಿನದ ಸಮರ ಶ್ರಮವನ್ನು ಕಳೆಯಲು ಎಲ್ಲರು ಇಚ್ಛಿಸಿ ವಿಶ್ರಾಂತಿ ಪಡೆಯಲು ಹೋದರು. ಆ ರಾತ್ರಿ ಸುಯೋಧನ ಓಲಗ ಸಭೆ ನಡೆಸಿದ. ಅಲ್ಲಿ ಸೇನಾಧಿಪತಿ ಕರ್ಣ, ಶಕುನಿ, ಕೃಪ ಮತ್ತು ಮಂತ್ರಿಗಳು ಸೇರಿದ್ದರು. ಆಗ ರಾಜ ದುರ್ಯೋಧನನು ಮಾತನಾಡುತ್ತಾ ' ಇಂದಿನ ಯುದ್ಧದಲ್ಲಿ ಪಾಂಡವರ ಅಟ್ಟಹಾಸ ಮೇರೆ ಮೀರಿತು ಎಂದನು. ಈ ಸಂದರ್ಭದಲ್ಲಿ ಕವಿ ತನ್ನ ಆರಾಧ್ಯ ದೈವ ಕೃಷ್ಣನ ಮಹತ್ವವನ್ನು ಹಿಗೆ ಹೇಳಿಸಿದ್ದಾನೆ.

" ಬಲುಹಲೇ ಬಳಿಕೇನು ಹಗೆಯ

ಗ್ಗಳಿಕೆ ಮೆರೆಯದೆ ಮುರವಿರೋಧಿಯ

ISSN PRINT 2319 1775 Online 2320 7876
*Research Paper* © 2012 IJFANS. All Rights Reserved, UGC CARE Listed ( Group -I) Journal Volume 11, Iss 11, 2022

ಬಲುಹ ಹೇಳಾ ಪಾರ್ಥನೆಂಬವನಾವ ಮಾನಿಪನು

ಬಲುಹು ಸಾರಥಿಯಿಂದ ರಿಪುಗಳ

ಗೆಲುವು ಸಾರಥಿಯಿಂದ ಸಾರಥಿ

ಯೊಲಿದಪೇನೇನಾಗದೆಂದನು ಭೂಪತಿಗೆ ಕರ್ಣ"

ಬಲವಿರುವುದು ಪಾಂಡವರಲ್ಲಿ ಅಲ್ಲ. ಮುರಹರನಾದ ಶ್ರೀಕೃಷ್ಣನಲ್ಲಿ. ಪಾರ್ಥನ ಸತ್ವವೇನೂ ಇಲ್ಲ. ದೈವ ರೂಪನಾದ ಶ್ರೀಕೃಷ್ಣನಂಥಹ ಸಾರಥಿ ದೊರೆತರೆ ಗೆಲವು ಹಬ್ಬವೇ ಆದೀತು. ಶ್ರೀಕೃಷ್ಣನು ಕೇವಲ ಅರ್ಜುನನ ರಥದ ಸಾರಥಿಯಲ್ಲ, ಅವನು ಇಡೀ ಮಹಾಭಾರತವೆಂಬ ರಥದ ಸಾರಥಿಯೇ ಆಗಿರುವನು. ಆದುದರಿಂದ ಪಾಂಡವರಿಗೆ ಗೆಲುವೆಂಬುದು ಅಗ್ಗದ ವಿಷಯವೇ ಆಗಿದೆಂಬುದು ಕವಿಯ ಅಭಿಪ್ರಾಯ. ಅದರ ಜೊತೆಗೆ ಕವಿ ನಾರಣಪ್ಪ, ಕರ್ಣಾಟ ಭಾರತ ಕಥಾಮಂಜರಿಯಲ್ಲಿ ಇನ್ನೂ ಹಲವಾರು ವಿಶೇಷತೆಗಳನ್ನು ಜನರೆದುರು ತೆರೆದು ಅರಳಿಸಿದ್ದಾನೆ. ಆ ನಿಟ್ಟಿನಲ್ಲಿ ಭಾರತದ ಸಾಂಸ್ಕೃತಿಕ ನಂಬಿಕೆಗಳಾದ ಜನ್ಮಾಂತರಗಳು, ಕರ್ಮಸಿದ್ಧಾಂತ, ಮೂರ್ತಿಪೂಜೆ, ಆತ್ಮಪೂಜೆ, ಜಾತಿ, ವರ್ಣಗಳ ಅಂತರ, ಭಗವಂತನ ಭಕ್ತಿ, ಶೃಂಗಾರ, ಜೀವನ ಮೌಲ್ಯಗಳು, ಜನಪದ ಹೃದಯವಂತಿಕೆ ಹೀಗೆ ಹತ್ತು ಹಲವು ತಾತ್ವಿಕತೆಗಳನ್ನು ವಿವರಿಸಿರುವ ಕುಮಾರವ್ಯಾಸ ಭಾರತೀಯ ಜೀವನವನ್ನು ವಿಶಾಲವಾಗಿ ನೋಡಿದ, ಅನುಭವಿದ ತತ್ವಜ್ಞಾನದ ಕವಿ ಎಂದರೆ ಅತಿಶಯೋಕ್ತಿಯಾಗಲಾರದು, ವೈವಿಧ್ಯಮಯ ಜನಾಂಗಗಳು, ಸಂಸ್ಕೃತಿಗಳ ಪರಿಚಯದೊಂದಿಗೆ ಭಾರತೀಯ ಆರ್ಯ ಸಮಾಜದ ಸಮಗ್ರ ಜೀವನ ವಿಶೇಷಗಳನ್ನು ದಕ್ಷಿಣಭಾರತಕ್ಕೆ ಹೊಂದುವಂತೆ ವರ್ಣಿಸಿರುವುದು ಕುಮಾರವ್ಯಾಸ ಕವಿಯ ಹೆಮ್ಮೆಯೇ ಸರಿ. ಅದುವೇ ಕರ್ಣಾಟ ಭಾರತ ಕಥಾಮಂಜರಿ.

**ಪರಾಮರ್ಶನ ಗ್ರಂಥಗಳು:**

1. ಕರ್ಣಾಟ ಭಾರತ ಕಥಾಮಂಜರಿ– ಮೈಸೂರು ವಿವಿ ಪ್ರಕಟನೆ (ಮೂಲಕೃತಿ ರೂಪ)
2. ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ– ಡಾ.ಚಿ.ಸಿ.ನಿಂಗಣ್ಣ. ಸಿದ್ಧಲಿಂಗೇಶ್ವರ ಪ್ರಕಾಶನ ಗುಲ್ಬರ್ಗ. –2008
3. ಕುಮಾರವ್ಯಾಸ ಪ್ರಶಸ್ತಿ– ವಿವಿಧ ಲೇಖಕರು. ಕನ್ನಡ ಸಾಹಿತ್ಯ ಪರಷತ್ತು.–1999
4. ಕುಮಾರವ್ಯಾಸ ಭಾರತದ ಕರ್ಣಪರ್ವ– ಬಡಗಸೀಮೆ ಮಹೇಶ್ ಮಧುವನಹಳ್ಳಿ– ಅಖಿಲಾ ಏಜ್ಸಿಸ್, ಮೈಸೂರು.–2004
5. ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ.ಮುಗಳಿ.
6. ಕನ್ನಡ ಸಾಹಿತ್ಯಕೋಶ– ರಾಜಪ್ಪ ದಳವಾಯಿ.
7. ನಡುಗನ್ನಡ ಕಾವ್ಯ ಸಂಚಯ– ಡಾ.ವೈ.ಚಂದ್ರಬಾಬು, ಅಂಜಲಿಪ್ರಕಾಶನ, ಮುಳಬಾಗಿಲು–2016

********

**ಡಾ.ವೈ.ಚಂದ್ರಬಾಬು**
ಗಂಗಾವತಿ ಭಾಗ್ಯಮ್ಮ ಗ್ರಾಮೀಣ ಪದವಿ ಮಹಾವಿದ್ಯಾಲಯ,
ಹೂವಿನಹಡಗಲಿ–583219
ಮೊಬೈಲ್ ನಂ: 9449380356
ಇಮೇಲ್–chandrababu.y3@gmail.com